# ಶಾಲಾಮಕ್ಕಳಿಗೆ ಸೌರ ಟೇಬಲ್ ಲ್ಯಾಂಪ್ ವಿತರಣೆ

■ ವಿಕ ಸುದ್ದಿಲೋಕ ಮಾಗಡಿ

''ಗ್ರಾಮೀಣ ಪ್ರದೇಶದ ಪ್ರತಿಭಾವಂತ ಬಡಮಕ್ಕಳ ವಿದ್ಯಾಭ್ಯಾಸಕ್ಕೆ ನೆರವಾಗಲು ಸವಲತ್ತುಗಳನ್ನು ವಿತರಿಸಲು ಶಾಲೆ ಮುಖ್ಯಸ್ಥರ ಸಹಕಾರ ಅಗತ್ಯ,'' ಎಂದು ಮುಖಂಡ ಸೋಹನ್ ಸೋಮಶೇಖರ್ ಹೇಳಿದರು.

ಬ್ಯಾಲಕೆರೆ ಡಾ.ಶ್ರೀ ಶಿವಕುಮಾರ ಸ್ವಾಮೀಜಿ ಗ್ರಾಮಾಂತರ ಪ್ರೌಢಶಾಲೆಯಲ್ಲಿ ನಡೆದ ಕಾರ್ಯಕ್ರಮದಲ್ಲಿ ತಾಲೂಕಿನ ಸಿದ್ಧಗಂಗಾಮಠದ ಶಿಕ್ಷಣ ಸಂಸ್ಥೆಗಳ 85 ಪ್ರತಿಭಾವಂತ ಬಡ ವಿದ್ಯಾರ್ಥಿಗಳಿಗೆ ಸ್ಮೈಟ್ ಮತ್ತು ವಿವಿಎಸ್ ಸೇವಾ ಸಂಸ್ಥೆಗಳ ಸಂಯುಕ್ತ ಆಶ್ರಯದಲ್ಲಿ ಸೋಲಾರ್ ಟೇಬಲ್ ಲ್ಯಾಂಪ್ ವಿತರಿಸಿ ಮಾತನಾಡಿ, ಐದು ವರ್ಷದಿಂದ ಎಸ್.ಎಂ.ಎಜುಕೇಶನ್ ಟ್ರಸ್ಟ್ ಶಾಲೆಯ ಒಂಭತ್ತನೇ ತರಗತಿಯಲ್ಲಿ ಹತ್ತು ಪ್ರತಿಭಾವಂತ ಬಡ ವಿದ್ಯಾರ್ಥಿಗಳನ್ನು ಆಯ್ಕೆಮಾಡಿಕೊಂಡು ಹತ್ತನೆ ತರಗತಿ ಮುಗಿಸುವವರೆಗೂ ತಿಂಗಳಿಗೆ ಒಂದು ಸಾವಿರ ರೂ.ವಿದ್ಯಾರ್ಥಿ ವೇತನ ನೀಡುತ್ತಾ ಬಂದಿದೆ. ಪ್ರತಿಭಾವಂತ ವಿದ್ಯಾರ್ಥಿಗಳು ಶೈಕ್ಷಣಿಕವಾಗಿ ಸಾಧನೆ ಮಾಡುವಲ್ಲಿ ಉತ್ಸಾಹ ತೋರುತ್ತಿರುವುದರಿಂದ ಟ್ರಸ್ಟ್ ವತಿಯಿಂದ ಇನ್ನೂ ಹೆಚ್ಚಿನ ಸೌಲಭ್ಯ, ಸವಲತ್ತು ಒದಗಿಸಲು ಚಿಂತನೆ ನಡೆಸಿದ್ದು, ಸೋಲಾರ್ ಟೇಬಲ್ ಲ್ಯಾಂಪ್ ವಿತರಿಸಲಾಗುತ್ತಿದೆ ಎಂದು ತಿಳಿಸಿದರು.

ಸ್ಮೈಟ್ ಸಂಸ್ಥೆ ಸಿಇಒ ಸೋಮಶೇಖರ್ ಮಾತನಾಡಿ, ಸರಕಾರಿ ಶಾಲೆಗಳಲ್ಲಿ ಇಂತಿಷ್ಟು ಸೌಲಭ್ಯಗಳಿವೆ. ಮಠದ ಅನುದಾನಿತ ಶಾಲೆಗಳಲ್ಲಿನ ವಿದ್ಯಾರ್ಥಿಗಳ ವಿದ್ಯಾಭ್ಯಾಸದ ದೃಷ್ಟಿಯಿಂದ ದಾನಿಗಳು ಮುಂದೆ ಬಂದು ಸಹಾಯ ಮಾಡಿದರೆ ಹೆಚ್ಚಿನ ಅನುಕೂಲವಾಗುತ್ತದೆ. ಆದ್ಯಷ್ಟಿಯಿಂದ ಸಿದ್ಧಗಂಗಾ ಮಠದ ಶಾಲೆಗಳನ್ನು ಆಯ್ಕೆ ಮಾಡಿಕೊಂಡಿರುವುದಾಗಿ ತಿಳಿಸಿದರು. ಡಾ.ವಸುಪ್ರಕಾಶ್ ಮಾತನಾಡಿ, ಗ್ರಾಮೀಣ ಪ್ರದೇಶದಲ್ಲಿ ಪ್ರತಿಭಾವಂತರಿದ್ದಾರೆ ಅವರನ್ನು ಗುರುತಿಸಿ ಪ್ರೋತ್ಸಾಹಿಸುವ ಕೆಲಸವಾಗಬೇಕಿದೆ,ಆನಿಟ್ಟಿನಲ್ಲಿ ಸ್ಮೈಟ್ ಜತೆಗೆ ವಿವಿಎಸ್ ಸಂಸ್ಥೆ ಕೈಜೋಡಿಸಿ ದೆ ಎಂದು ಹೇಳಿದರು.

ತಾಲೂಕು ಸಿದ್ಧಗಂಗಾ ಮಠದ ಬ್ಯಾಲಕೆರೆ, ಸೋಲೂರು, ಗುಡೇಮಾರನಹಳ್ಳಿ, ಎಣ್ಣೆಗೆರೆ, ಕಂಚುಗಲ್ ಬಂಡೇಮಠ, ನಾರಸಂದ್ರ,ಕುದೂರು ಮಹಂತೇಶ್ವರ, ಹುಲಿಕಲ್,ಬಸವೇಶ್ವರ ಪ್ರೌಢಶಾಲೆಗಳ ಮಕ್ಕಳಿಗೆ ಸೋಲಾರ್ ಟೇಬಲ್ ಲ್ಯಾಂಪ್ ವಿತರಿಸಲಾಯಿತು.

ಕಾರ್ಯಕ್ರಮದಲ್ಲಿ ಶಾಲಾ ಮುಖ್ಯಸ್ಥ ನಾರಾಯಣಪ್ಪ,ಗುರುರಾಜ,ಗಣೇಶ್ ಗೋವಿಂದರಾಜು, ಕೋಮಲ, ಹೇಮಂತ್, ಸಹಶಿಕ್ಷಕರ ಸಂಘದ ಪ್ರತಿನಿಧಿ ಪ್ರಭುದೇವರು ಪ್ರಮುಖವಾಗಿ ಭಾಗವಹಿಸಿದ್ದರು.



ಬ್ಯಾಲಕೆರೆ ಶಾಲೆಯಮಕ್ಕಳಿಗೆ ಸ್ಮೈಟ ಸಂಸ್ಥೆ ಸೋಲಾರ್ ಟೇಬಲ್ ಲ್ಯಾಂಪ್ ವಿತರಿಸಿತು

Scanned by CamScanner